ಪ್ರಮಾಣದಲ್ಲಿ ಇಳಿಕೆ, ಅಧಿಕ ಬಡ್ಡಿದರ ಹೊಂದಿರುವ ಸಾಲಗಳ ಬಾಕಿ ಹಾಗೂ ಬಡ್ಡಿದರದಲ್ಲಿ ಉಂಟಾದ ಕಡಿತ ಇವು ಸಂಸ್ಥೆಯು ನಷ್ಟ ಅನುಭವಿಸಲು ಪ್ರಮುಖ ಕಾರಣಗಳಾಗಿವೆ.

ಇ) ಮೆ. ಕ್ರಿಸಿಲ್ ಲೆಡ್ಜ್‌ಸರಿ ಸರ್ವಿಸಸ್ ಇವರ ಶಿಫಾರಸ್ಸುಗಳನ್ನು ಜಾರಿಗೊಳಿಸಲಾಗಿದೆ. ಈ ನಿಟ್ಟಿನಲ್ಲಿ ಸಿಬ್ಬಂದಿ ಸಂಖ್ಯೆಯನ್ನು ಕಡಿತಗೊಳಿಸಿ ಆಡಳಿತ ನಿರ್ವಹಣಾ ವೆಚ್ಚವನ್ನು ಇಳಿಸಲು ಸ್ವಯಂ ನಿವೃತ್ತಿ ಯೋಜನೆಯನ್ನು ಜಾರಿ ಮಾಡಲಾಗಿದೆ. ನಷ್ಟದಲ್ಲಿ ನಡೆಯುತ್ತಿದ್ದ ಸಂಸ್ಥೆಯ ಹತ್ತು ಶಾಖಾ ಕಛೇರಿಗಳನ್ನು ಮುಚ್ಚಲಾಗಿದೆ. ಇತ್ತೀಚಿನ ರಾಜ್ಯ ಹಣಕಾಸು ಸಂಸ್ಥೆಗಳ ಕಾಯ್ದೆಗೆ ಭಾರತ ಸರ್ಕಾರವು ಮಾಡಿರುವ ತಿದ್ದುಪಡಿಯಿಂದಾಗಿ 5.00 ಕೋಟಿ ರೂ.ಗಳ ಸಾಲವನ್ನು ಹಾಗೂ ಎಸ್‌ಐಡಿಬಿಐ ಅನುಮತಿ ಪಡೆದು 20.00 ಕೋಟಿ ರೂ.ಗಳ ಸಾಲವನ್ನು ಮಂಜೂರು ಮಾಡಬಹುದಾಗಿದೆ. ಅಲ್ಲದೆ ಸಂಸ್ಥೆಯ ಶೇರು ಬಂಡವಾಳವನ್ನು 500.00 ಕೋಟಿ ರೂ.ಗಳಿಗೆ ಹೆಚ್ಚಿಸಲು ತಿದ್ದುಪಡಿಯಲ್ಲಿ ಅವಕಾಶ ಮಾಡಲಾಗಿದೆ. ಈ ಕ್ರಮಗಳಿಂದ ಸಂಸ್ಥೆಯನ್ನು ಲಾಭದಾಯಕವಾಗಿ ನಡೆಸಲು ಸಾಧ್ಯವಾಗಬಹುದು ಎಂದು ನಿರೀಕ್ಷಿಸಲಾಗಿದೆ.

N.G.E.F. ಕಾರ್ಖಾನೆಯ ಪುನಶ್ಚೇತನ ಕಾರ್ಯಕ್ರಮ

3295 - ಶ್ರೀ ರಾಮಲಿಂಗಾರೆಡ್ಡಿ (ಜಯನಗರ) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರಿನ ಎನ್.ಜಿ.ಇ.ಎಫ್ ಕಾರ್ಖಾನೆ ಎಂದು ಪ್ರಾರಂಭವಾಯಿತು?

ಆ) ಈ ಕಾರ್ಖಾನೆ ಯಾವ ವರ್ಷದಿಂದ ನಷ್ಟಕ್ಕೆ ಗುರಿಯಾಗಿದೆ?

ಇ) ಇಲ್ಲಿಯವರೆಗೆ ಆಗಿರುವ ನಷ್ಟವೆಷ್ಟು?

ಈ) ಈ ಕಾರ್ಖಾನೆಯನ್ನು ಪುನಶ್ಚೇತನ ಗೊಳಿಸಲು ಸರ್ಕಾರ ಕಾರ್ಯಕ್ರಮ ಹಮ್ಮಿಕೊಂಡಿದೆಯೇ?

ಉ) ಹಾಗಿದ್ದಲ್ಲಿ ಅದರ ಪೂರ್ಣ ವಿವರ ನೀಡುವುದು?

ಶ್ರೀ ಆರ್. ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು) :

ಅ) ಎನ್.ಜಿ.ಇ.ಎಫ್. ಸಂಸ್ಥೆಯನ್ನು ಈ ಮೊದಲಿದ್ದ ಜಿ.ಇ.ಎಫ್.ನ (ಈಗಿನ ಕವಿಕಾ) ವಿಸ್ತರಣೆಯಾಗಿ 1961 ರಲ್ಲಿ ಆರಂಭಿಸಲಾಯಿತು. 19-4-1965 ರಲ್ಲಿ ಎನ್‌ಜಿಇಎಫ್‌ನ್ನು ಒಂದು ಕಾರ್ಪೊರೇಟ್ ಸಂಸ್ಥೆಯಾಗಿ ಪರಿವರ್ತಿಸಿ ಎನ್.ಜಿ.ಇ.ಎಫ್. ಲಿಮಿಟೆಡ್ ಎಂದು ನೋಂದಣಿ ಮಾಡಲಾಯಿತು.

ಆ) ಸಂಸ್ಥೆಯು 1988 ರಿಂದ ನಷ್ಟ ಅನುಭವಿಸುತ್ತಿದ್ದು, 1991-92ರಿಂದ ಸತತವಾಗಿ ನಷ್ಟ ಅನುಭವಿಸುತ್ತಿದೆ.

ಇ) ದಿನಾಂಕ 31-3-2000 ವರೆಗೆ ಸಂಸ್ಥೆಯ ಕ್ರೋಡೀಕೃತ ನಷ್ಟಗಳ ಮೊತ್ತ 222.90 ಕೋಟಿ ರೂಪಾಯಿಗಳಷ್ಟಾಗಿರುತ್ತದೆ.

ಈ) ಸಂಸ್ಥೆಯ ಪುನರ್ವಸತೀಕರಣಕ್ಕಾಗಿ ಸರ್ಕಾರವು ಕ್ರಮ ಕೈಗೊಂಡಿತು. ಆದರೆ ಅದು ಯಶಸ್ವಿಯಾಗಲಿಲ್ಲ. ಆದ್ದರಿಂದ ಸರ್ಕಾರವು ಎನ್.ಜಿ.ಇ.ಎಫ್. ಸಂಸ್ಥೆಯ ಖಾಸಗೀಕರಣಕ್ಕೆ ಪ್ರಸ್ತಾವನೆಯನ್ನು ಪರಿಶೀಲಿಸುತ್ತಿದೆ.

ಉ) ಖಾಸಗೀಕರಣದ ಸಾಧ್ಯತೆಗಳನ್ನು ಅನ್ವೇಷಿಸಲು ಮತ್ತು ಆ ಸಂಬಂಧವಾಗಿ ಸಲಹೆ ನೀಡಲು ಒಂದು ಜಾಗತಿಕ ಸಮಾಲೋಚಕ ಸಂಸ್ಥೆಯನ್ನು ನೇಮಿಸಿಕೊಳ್ಳಲಾಗುತ್ತಿದೆ. (ಮೆ: ಅರ್ನೆಸ್ಟ್ ಅಂಡ್ ಯಂಗ್ ಪ್ರೈ. ಲಿಮಿಟೆಡ್)

ವಿದ್ಯುತ್ ಉತ್ಪಾದನೆಯ ಪ್ರಮಾಣ

3296 - Sri A. Ramadas (Krishnaraja) : Will the Hon'ble Minister of State for Energy be pleased to state?

a) *How many units of electricity are generated in the State? How many units are being purchased?*

b) *How many units are treated as Transmission and Distribution loss? How many units are treated as theft?*

c) *How much amount will be saved if Transmission, Distribution loss and theft are stopped?*

Sri Veerakumar Patil : (Minister of State for Energy) :

a) The quantum of Electricity generated in state from different sources during the year 1999-2000 and purchased from Central and Maharastra are furnished in the Annexure.

b) The Transmission and Distribution loss in estimated to be 32.69% (8538 Mus). This includes loss in extra high tension transmission lines, HT lines, LT lines and in Distribution transformers. The loss due to power theft and other reasons like defective meters, energy utilised by the Un-authorised IP sets etc. is 5.3% (1387 MUs).

c) About 261 Mus will be saved if losses due to Transmission, Distribution and theft is reduced by1%. If the power purchase from the high cost source is reduced it amounts for savings to the tune of Rs. 70 crores.